ಕರ್ನಾಟಕ ಸರ್ಕಾರ

**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

(ಅರಣ್ಯಪಡೆ ಮುಖ್ಯಸ್ಥರು)ರವರ ಕಛೇರಿ

Office of
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡರಸ್ತೆ,

ಮಲ್ಲೇಶ್ವರಂ, ಬೆಂಗಳೂರು- 560003

Aranya Bhavan, 18th Cross
Malleshwaram, Bengaluru-560 003
Telephone : 080 2334 6472
Email : apccffc@gmail.com

Old File No. A5(3)/GFL/CR-11/2017-18
E-Office File No. KFD/HOFF/A5-3(GFL)/27/2018-FC-KFD

**E-68880**

ದಿನಾಂಕ 30-11-2019

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ

ಮೈಸೂರು ವಿಭಾಗ, ಮೈಸೂರು

**ವಿಷಯ:** Diversion of 0.2219 hectare of forest land in Chamundibetta village Sy. No. 3 and Lalitadripura village Sy. No. 28, Chamundibetta State Forest, Kasba Varuna Hobli, Mysuru Taluk & District for laying Zipline with Walking Path and construction of Base structure in favour of the Deputy Director, Department of Tourism, Mysuru

**Propsoal No. FP/KA/OTHERS/28747/2017**

**ಉಲ್ಲೇಖ:** 1. ಈ ಕಛೇರಿಯ ಸಮಸಂಖ್ಯೆ ಪತ್ರದ ದಿನಾಂಕ 21-08-2019

2. ನಿಮ್ಮ ಪತ್ರದ ಸಂಖ್ಯೆ ಸಿ2/ಭೂಮಿ/ಎಫ್.ಸಿ/ಜಿಎಲ್-97/2017-18 ದಿನಾಂಕ 30-09-2019

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು ಚಾಮುಂಡಿಬೆಟ್ಟ ಮೀಸಲು ಅರಣ್ಯ ಪ್ರದೇಶದ ಸರ್ವೆ ನಂ. 3 ಹಾಗೂ ಲಲಿತಾದ್ರಿಪುರ ಗ್ರಾಮ ಸರ್ವೆ ನಂ. 28 ರ ಅರಣ್ಯದಲ್ಲಿ ಒಟ್ಟು 0.2219 ಹೆಕ್ಟೇರ್ ಪ್ರದೇಶವನ್ನು ಚಾಮುಂಡಿ ಬೆಟ್ಟಕ್ಕೆ ತೆರಳಲು ಜಿಪ್ ಲೈನ್ ನಿರ್ಮಿಸುವ ಸಂಬಂಧ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಕಲಂ 2ರ ಅನ್ವಯ ಪ್ರವಾಸೋದ್ಯಮ ಇಲಾಖೆ ಇವರಿಗೆ ಗುತ್ತಿಗೆ ನೀಡುವ ಸಂಬಂಧ ದಿನಾಂಕ 27-04-2019 ರಂದು ಸಲ್ಲಿಸಿದ ಪ್ರಸ್ತಾವನೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸಿ ದಾಖಲಾತಿಗಳನ್ನು ಸಲ್ಲಿಸಲು ಉಲ್ಲೇಖ (1)ರ ಈ ಕಛೇರಿಯ ದಿನಾಂಕ 21-08-2019ರ ಪತ್ರದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವೃತ್ತ ರವರಿಗೆ ಮತ್ತು ನಿಮಗೆ ತಿಳಿಸಲಾಗಿತ್ತು.

ತದನಂತರ, ಉಲ್ಲೇಖ (2)ರ ಪತ್ರದಲ್ಲಿ ಮೈಸೂರು ನಗರದ ಚಾಮುಂಡಿ ಬೆಟ್ಟವು ಮೀಸಲು ಅರಣ್ಯ ಪ್ರದೇಶವಾಗಿರುವುದರಿಂದ ಸದರಿ ಪ್ರದೇಶವನ್ನು ಉಳಿಸಿಕೊಳ್ಳುವ ಹಿತದೃಷ್ಟಿಯಿಂದ ಜಿಪ್ ಲೈನ್ ನಿರ್ಮಾಣ ಮಾಡಿದಲ್ಲಿ ಚಾಮುಂಡಿ ಬೆಟ್ಟದ ಪ್ರಾಕೃತಿಕ ಸೌಂದರ್ಯಕ್ಕೆ ಧಕ್ಕೆಯಾಗುವುದಲ್ಲದೇ ಅಲ್ಲಿರುವ ವನ್ಯ ಪ್ರಾಣಿ ಪಕ್ಷಿಗಳಿಗೆ ತೊಂದರೆಯಾಗುವ ಸಂಬಂಧವಿರುವುದರಿಂದ ಜಿಪ್ ಲೈನ್ ನಿರ್ಮಾಣದ ಅವಶ್ಯಕತೆಯಿರುವುದಿಲ್ಲ ಎಂದು ಅಭಿಪ್ರಾಯ ಸೂಚಿಸುತ್ತಾ, ಸದರಿ ಪ್ರಸ್ತಾವನೆಯನ್ನು ಕೈ ಬಿಡಲು ನೀವು ಕೋರಿರುತ್ತೀರಿ.

ಆದುದರಿಂದ, **ನೀವು ಅಥವಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ಖುದ್ದಾಗಿ ಸದರಿ ಪ್ರದೇಶಕ್ಕೆ ಭೇಟಿ ನೀಡಿ, ಸದರಿ ಪ್ರದೇಶದಲ್ಲಿ ಉಪಯೋಗಿ ಸಂಸ್ಥೆಯವರು 1980ರ ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘಿಸಿ ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ ಹಾಗೂ ಪ್ರಸ್ತುತ ಸದರಿ ಪ್ರದೇಶವು ಅರಣ್ಯ ಇಲಾಖೆಯ ವಶದಲ್ಲಿರುತ್ತದೆ ಎಂಬುದರ**

ಬಗ್ಗೆ ವಾಸ್ತವಾಂಶದ ಸ್ಥಳ ತನಿಖಾ ವರದಿಯನ್ನು ದಿನಾಂಕ ನಮೂದಿಸಿ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವೃತ್ತ ಇವರ ಮೂಲಕ ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಶೀಘ್ರ ಕ್ರಮ ಕೈಗೊಳ್ಳಲು ಸೂಚಿಸಿದೆ.

30/11/19

for

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ)

O/C

ಪ್ರತಿಯನ್ನು ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವೃತ್ತ, ಮೈಸೂರು ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ರವಾನಿಸಲಾಗಿದೆ
ದಿನಾಂಕ 30-11-2019

3-20pm